(ಒ) ಬೀದರ್ ಜಿಲ್ಲೆಯ ಹಳ್ಳಿಖೇಡಿನ ಬಿ.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆಯಲ್ಲಿ ನಡೆಯಿತೆನ್ನಲಾದ ಅವ್ಯವಹಾರ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಹಳಿಖೇಡನಲ್ಲಿರುವ ಬಿ.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆಯಲ್ಲಿ 18 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಸಿ.ಐ.ಡಿ. ತನಿಖೆಯಿಂದ ವ್ಯಕ್ತವಾಗಿದೆ. ಆದರಲ್ಲಿ ಭಾಗಿಯಾಗಿರುವಂತಹ ಅಧಿಕಾರಿಗಳು ಮಂಡಳಿಯ ಸದಸ್ಯರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಕೂಡ ಹೂಡಬೇಕೆಂದು ಸಿ.ಐ.ಡಿ.ಯವರು ತನಿಖೆಯ ವರದಿಯಲ್ಲಿ ಮಂಡಿಸಿದ್ದಾರೆ. ಆದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ? ಕ್ರಿಮಿನಲ್ ಮೊಕದ್ದಮೆಯನ್ನು ಹೂಡುತ್ತವೆಯೊ, ಇಲ್ಲವೊ, ಏನು ಕ್ರಮವನ್ನು ತೆಗೆದುಕೊಳ್ಳುತ್ತದೆಂಬುದನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರದಲ್ಲಿ ಸಿ.ಐ.ಡಿ. ತನಿಖೆಯಾಗಿ ಈಗಾಗಲೇ ಸರ್ಕಾರಕ್ಕೆ ವರದಿ ಬಂದಿದೆ. ಸರ್ಕಾರದ ಪರಿಶೀಲನೆಯಲ್ಲಿದೆ. ಅದಷ್ಟು ಬೇಗ ಇದನ್ನು ಸಚಿವ ಸಂಪುಟದಲ್ಲಿ ಈ ವಿಚಾರವನ್ನು ತಂದು ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಗಮನಹರಿಸುತ್ತೇವೆಂದು ತಮ್ಮ ಮುಖೇನಾ ತಿಳಿಸಬಯಸುತ್ತೇನೆ.

ಶ್ರೀ ಜಿ.ಪಿ. ಶ್ರೀರಾಂರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದನ್ನು ಪರಿಶೀಲನೆ ಮಾಡುವಂಥಾದ್ದು ಅಲ್ಲ. ಇದರ ಬಗ್ಗೆ ಸಿ.ಐ.ಡಿ.ಯವರು ನಿರ್ದಿಷ್ಟವಾಗಿ ಸೂಚನೆಯನ್ನು ಕೊಟ್ಟಿದ್ದಾರೆ. ಕ್ರಿಮಿನಲ್ ಮೊಕದ್ದಮೆಯನ್ನು ಅಧಿಕಾರಿಗಳ ಮೇಲೆ ಹೂಡಬೇಕೆಂದು ಹೇಳಿದ್ದಾರೆ. ಇಲ್ಲಿ ಕಬ್ಬು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಮತ್ತು ಯಂತ್ರಗಳನ್ನು ಖರೀದಿ ಮಾಡುವುದರ ವಿಷಯದಲ್ಲಿ 18 ಕೋಟಿ ರೂಪಾಯಿಗಳ ದುರುಪಯೋಗವಾಗಿದೆ ಎಂದು ಸ್ಪಷ್ಟವಾದ ಪುರಾವೆಗಳು ಇವೆ ಎಂದು ಅವರು ವರದಿಯಲ್ಲಿ ಕೊಟ್ಟಿದ್ದಾರೆ. ಆದುದರಿಂದ ಇದರಲ್ಲಿ ಪರಿಶೀಲನೆ ಮಾಡುವಂತಹ ಪ್ರಶ್ನೆಯೇ ಇಲ್ಲ, ನೇರವಾಗಿ ಕ್ರಮ ತೆಗೆದುಕೊಂಡು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ ಅವರಿಂದ 18 ಕೋಟಿ ರೂಪಾಯಿಗಳ ರಿಕವರಿ ಮಾಡಬೇಕು ಮತ್ತು ರೈತರೂ ಕೂಡ ಇದರಿಂದ ನಷ್ಟ ಹೊಂದಿದ್ದಾರೆ. ಇದರಲ್ಲಿ ಪರಿಶೀಲನೆ ಮಾಡತಕ್ಕಂಥಾದ್ದು ಏನೂ ಇಲ್ಲ, ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಉಮೇಶ್. ವಿ. ಕತ್ತಿ. : ಆ ಸಂಸ್ಥೆಯಲ್ಲಿ ಆದ ಭ್ರಷ್ಟಚಾರದ ಬಗ್ಗೆ ಸಿ.ಐ.ಡಿ. ತನಿಖೆಯಾಗಿ ವರದಿ ಬಂದಿದೆ, ಸಂಬಂಧಪಟ್ಟವರು ಅಧಿಕಾರಿಗಳಾಗಿರಬಹುದು, ಆಡಳಿತ ಮಂಡಳಿಯ ಸದಸ್ಯರುಗಳು ಆಗಿರಬಹುದು. ಆಡಳಿತ ಮಂಡಳಿಯಲ್ಲಿ ಕೆಲವು ತೊಂದರೆಗಳು ಇವೆ. ಇವೆರಡರ ಪೂರ್ತಿ ವರದಿ ಬಂದಮೇಲೆ ಅದನ್ನು ನೋಡಿಕೊಂಡು ಯಾರ ಯಾರ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕು. ಅದರಲ್ಲಿ ತಪ್ಪಿತಸ್ಥರು ಯಾರಿದ್ದಾರೆ, ಅವರೆಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮುಖೇನಾ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.